**This question paper consists of 37 questions and 8 printed pages.**

**Roll No.** ☐☐☐☐☐☐☐☐☐☐☐☐ **Code No. 42/S/A/K**
ರೋಲ್ ನಂ.

# KANNADA

## ಕನ್ನಡ

## (208)

**Day and Date of Examination**
ಪರೀಕ್ಷೆಯ ದಿನ ಮತ್ತು ತಾರೀಖು ______________________

**Signature of Invigilators** 1. ______________________
ಉಸ್ತು ವಾರಿದಾರರ ರುಜು
2. ______________________

---

ಸಾಮಾನ್ಯ ಸೂಚನೆಗಳು :

1 ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

2 ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದೂ ಪರೀಕ್ಷಿಸಿ.

3 ವಸ್ತು ನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

4 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

5 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.

6 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **42/S/A/K** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.

# KANNADA

## ಕನ್ನಡ

## (208)

ಸಮಯ : **3** ಗಂಟೆಗಳು ] [ಗರಿಷ್ಠ ಅಂಕ : **100**

ಸೂಚನೆಗಳು : **(1)** ಎಲ್ಲಾ ಪ್ರಶ್ನೆಗಳೂ ಕಡ್ಡಾಯ.

**(2)** ಪ್ರಶ್ನೆ **1** ರಿಂದ **20** ರ ವರೆಗೆ ಪ್ರತಿ ಪ್ರಶ್ನೆಗೆ ಒಂದು ಅಂಕ.

**1** ಇವುಗಳಲ್ಲಿ ಜೀವನ ಚರಿತ್ರೆ ಯಾವುದು ?

(A) ಆಹುತಿ (B) ನಮ್ಮ ಮೇಷ್ಟರು

(C) ಕೆಂಪಯ್ಯ (D) ಕೆರೆಯದಡದಲ್ಲಿ

**2** 'ನಾವೆಲ್ಲರೂ ಒಂದೇ ಜಾತಿ' - ಬರೆದವರು

(A) ಸವಿತಾ ನಾಗಭೂಷಣ (B) ಎಂ. ಗೋಪಾಲಕೃಷ್ಣ ಅಡಿಗ

(C) ಕೆ.ಎಸ್. ನರಸಿಂಹ ಸ್ವಾಮಿ (D) ಕುವೆಂಪು

**3** 'ಅಜ್ಜ' - ಶಬ್ದದ ತತ್ಸಮ ರೂಪ -

(A) ಆರ್ಯ (B) ಆಯಿ

(C) ಅಜ್ಜಿ (D) ಯಾವುದೂ ಅಲ್ಲ

**4** 'ಫರಿಸ್ತಿಥಿ' - ಶಬ್ದದ ಸರಿಯಾದ ರೂಪ -

(A) ಫರಿಸ್ಥಿತಿ (B) ಪರಿಸ್ತಿಥಿ

(C) ಫರಿಸ್ತಿತಿ (D) ಪರಿಸ್ಥಿತಿ

**5** ಕವಿವರ ಕಾಮದೇನುವೆಂದೆಂಬುದು .............

(A) ಅತ್ತಿಮಬ್ಬೆಯನೆ ಜಗಂ (B) ಅರಿಕೇಸರಿಯನು

(C) ಎಲ್ಲಾ ಶ್ರೀಮಂತರನ್ನು (D) ಇವರು ಯಾರೂ ಅಲ್ಲ

**6** ಕಥಾನಾಯಕನು ರತ್ನ ವ್ಯಾಪಾರಿಯನ್ನು ಮೊದಲು ನೋಡಿದ್ದು -

(A) ದೆಹಲಿಯಲ್ಲಿ (B) ರೈಲು ಪ್ರಯಾಣದಲ್ಲಿ

(C) ತನ್ನ ಮನೆಯಲ್ಲಿ (D) ರತ್ನ ವ್ಯಾಪಾರಿಯ ಮನೆಯಲ್ಲಿ

**7** ಇವರಲ್ಲಿ ಹಳಗನ್ನಡದ ಕವಿ ಯಾರು ?

(A) ಕುವೆಂಪು (B) ರನ್ನ

(C) ಕುಮಾರವ್ಯಾಸ (D) ಸರ್ವಜ್ಞ

8 'ದಾನಗುಣೈಕಾಂಬುಧಿ' - ಇಲ್ಲಿ ಬಂದಿರುವ ಅಲಂಕಾರ -

(A) ಅರ್ಥಾಂತರ ನ್ಯಾಸ (B) ಉಪಮಾ

(C) ರೂಪಕ (D) ಸರಳ

9 ವಾರದ ಯಾವ ದಿನ ನನ್ನೂರಿನಲ್ಲಿ ಸಂತೆ ನಡೆಯುತ್ತಿದೆ ?

(A) ಭಾನುವಾರ (B) ಶುಕ್ರವಾರ

(C) ಸೋಮವಾರ (D) ಶನಿವಾರ

10 ಹಳೆಯ ಕಾಲದ ವಸ್ತುಗಳು ಮಾಯವಾಗುತ್ತಿವೆ. ಇಲ್ಲಿರುವ ಕ್ರಿಯಾಪದ ಯಾವುದು ?

(A) ಕಾಲದ (B) ಮಾಯವಾಗುತ್ತಿವೆ

(C) ವಸ್ತುಗಳು (D) ಹಳೆಯ

11 ಇವುಗಳಲ್ಲಿ ಕನ್ನಡ ಶಬ್ದ ಗುರುತಿಸಿ -

(A) ಸ್ಕೂಲು (B) ಕಛೇರಿ

(C) ಟೇಬಲ್ (D) ನೀರು

12 ಜೀವನವನೆ ದೇವಿಗೆರೆವೆ ಬಿಡುತೆ ..................

(A) ಗುಡಿಯ ಕಟ್ಟಲು (B) ಮನೆಯ ಕಟ್ಟಲು

(C) ದೇಶವ ಕಟ್ಟಲು (D) ಕರ್ನಾಟಕವ ಕಟ್ಟಲು

13 ಪು.ತಿ.ನ. ಅವರ ಪೂರ್ಣ ಹೆಸರು

(A) ಪುಟ್ಟಪ್ಪ. ತಿ.ನ. (B) ಪು.ತಿರುವ. ನರಸಿಂಹ

(C) ಪು.ತಿ. ನರಸಿಂಹಚಾರ್ (D) ಪು.ತಿ. ನರಸಿಂಹ ಸ್ವಾಮಿ

14 ಸವಿತಾ ನಾಗಭೂಷಣ ಬರೆದಿರುವುದು -

(A) ವಚನಗಳು (B) ಕವನ

(C) ಮಹಾಕಾವ್ಯ (D) ಕೀರ್ತನೆಗಳು

15 'ನಂದಾದೀವಿಗೆ' - ಅಂದರೆ

(A) ಆರದಿರುವ ದೀಪ (B) ನಂದನ ದೀವಿಗೆ

(C) ಮರೆಯಾಗದ ಚೇತನ (D) ನಂದುವ ದೀಪ

16 ಉಗುರಲ್ಲಿ ಚಿವುಟೋ ಚಿಗುರಿಗೆ ..................

(A) ಕೊಡಲಿ ತೆಗೆದುಕೊಂಡಂತೆ (B) ಬಾಯಲ್ಲಿ ತಿಂದರಂತೆ

(C) ಸುಮ್ ಸುಮ್ಮನೇ ಅತ್ತರಂತೆ (D) ಇವು ಯಾವುದೂ ಅಲ್ಲ

17 ಚೆನ್ನಮ್ಮ ಕನ್ನಡಿಗರನ್ನು ಹೀಗೆ ಸಂಬೋಧಿಸುತ್ತಾಳೆ -

(A) ಕನ್ನಡಿಗರೇ (B) ಧೈರ್ಯಶಾಲಿಗಳೇ

(C) ಅಭಿಮಾನ ಹೀನರೇ (D) ಕನ್ನಡದ ಮರಿಸಿಂಹಗಳಿರಾ

18 ಅಲ್ಪಪ್ರಾಣ ಅಕ್ಷರಗಳು -

(A) ಕ, ಚ, ಟ, ತ, ಪ (B) ಅಂ, ಅಃ

(C) ಅ, ಆ, ಇ, ಈ, ಉ (D) ಥ, ಥೇ, ಧೆ, ಭ

19 ಇವುಗಳಲ್ಲಿ 'ರ' ಗಣ ಗುರುತಿಸಿ -

(A) ಕಣ್ಮರೆ (B) ಕಣ್ಮರೇ

(C) ಮುಖಂಡ (D) ನೋಡುತ್ತೀ

20 "ಮಾತ್ನಾಡುವ ಅಡಿಕೆ ನೆಗಾಡುವ ಎಲೆ" ಪಠ್ಯ -

(A) ರಾಜನ ಚರಿತ್ರೆ (B) ಇತಿಹಾಸ

(C) ಜಾನಪದ ಕತೆ (D) ಹೊಸಗನ್ನಡ ಕತೆ

## ಪದ್ಯಭಾಗ

21 ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ $2 \times 1 = 2$

(i) ಕೇ.ವಿ.ಪುಟ್ಟಪ್ಪನವರು ಬರೆದ ಯಾವುದಾದರೂ ಒಂದು ಕವನ ಸಂಕಲನ ಹೆಸರಿಸಿ

(ii) ಕವಿ ದ.ರಾ. ಬೇಂದ್ರೆಯವರು, ಮಾನವನು ಭಗವಂತನಿಗೆ ಯಾವಾಗ ಶರಣಾಗುತ್ತಾನೆ - ಎನ್ನುತ್ತಾರೆ ?

(iii) ಯಾರಿಂದ ಕವಿತೆ ಹುಟ್ಟಲು ಸಾಧ್ಯವಾಗುವುದಿಲ್ಲ ?

(iv) ಚಿಂತೆಗೆ ಬಡವ - ಬಲ್ಲಿದ ಎಂಬ ಭೇದವಿದೆಯೇ ?

22 ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ 3-4 ವಾಕ್ಯದಲ್ಲಿ ಉತ್ತರ ಬರೆಯಿರಿ - $2\frac{1}{2} \times 2 = 5$

(i) "ಅಕ್ಕರೆಯ ದನಿಯಾಕೆ" - ಪದ್ಯದ ಬಾಷೆ ಮತ್ತು ಶೈಲಿಯನ್ನು ಪರಿಚಯ ಮಾಡಿಕೊಡಿ

(ii) ಚೆಲುವೆಯನ್ನು ಕವಿ ಪುತಿನ ತಮ್ಮಲ್ಲಿ ಉಳಿಸಿಕೊಂಡದ್ದು - ಹೇಗೆ ?

(iii) ಪಂಪನ ಪ್ರಕಾರ ಆದರ್ಶ ಮನುಷ್ಯರ ಗುಣಗಳೇನು ?

23 ಇವುಗಳಲ್ಲಿ ಒಂದು ಪ್ರಶ್ನೆಗೆ ಸುಮಾರು ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

(i) ಇಂದು ಮುಖಿಯರ ಮುಂದೆ ಉತ್ತರನು ತನ್ನ ಪರಾಕ್ರಮವನ್ನು ಹೇಗೆ ವ್ಯಕ್ತ ಪಡಿಸುತ್ತಾನೆ ?

(ii) "ಮಾತು" - ಹೇಗಿರಬೇಕು ? ಇದರ ಬಗ್ಗೆ ವಚನಕಾರರ ಅಭಿಪ್ರಾಯವೇನು ?

## ಗದ್ಯಭಾಗ

24 ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ ಃ $1\times3=3$

(i) ತಡವಾಗಿ ಏಳುವ ವಿದ್ಯಾರ್ಥಿಗಳನ್ನು ಏನೆಂದು ಹರಸುತ್ತಾರೆ ?

(ii) ಸೋಬಾನೆ ಚಿಕ್ಕಮ್ಮನ ಆತಂಕವೇನು ?

(iii) ಗಾಂಧೀಜಿಯವರು ಪೊಲೀಸ್ ಕಾವಲನ್ನು ಏಕೆ ನಿರಾಕರಿಸಿದರು ?

(iv) ಕೆರೆಯ ದಡದಲ್ಲಿ ಕವಿ ಮಾಡುತ್ತಿದ್ದ ಚೇಷ್ಟೆ ಯಾವುದು ?

25 ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ. $2\frac{1}{2}\times 2 = 5$

(i) ಮಂಡೋದರಿಯನ್ನು ಸೀತೆ ಹೇಗೆ ಹೊಗಳುತ್ತಾಳೆ ?

(ii) ಬಾತ್‌ರೂಂನಿಂದ ಲೇಖಕ ಗೋರುರು ರಾಮಸ್ವಾಮಿ ಅಯ್ಯಂಗಾರ್ ಏಕೆ ಹೊರಬರಲಾಗಲಿಲ್ಲ ?

(iii) ಶಾಂತಿಯು ಬರೆದ ಪತ್ರದ ಸಾರಾಂಶ ತಿಳಿಸಿರಿ.

26 ಇವುಗಳಲ್ಲಿ ಒಂದು ಪ್ರಶ್ನೆಗೆ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 6

(i) ನಿಮ್ಮ ಶಾಲಾ ಜೀವನದಲ್ಲಿ ನಡೆದ ಒಂದು ಮೋಜಿನ ಪ್ರಸಂಗವನ್ನು ವಿವರಿಸಿ ಬರೆಯಿರಿ.

(ii) ಹಿಮಾಲಯವನ್ನು ಶುದ್ಧಿಗೊಳಿಸಬೇಕಾದ ಅಗತ್ಯಗಳನ್ನು ವಿವರಿಸಿ.

27 ಈ ಪದ್ಯದ ಭಾವಾರ್ಥ ಬರೆಯಿರಿ. 5

ಅನುಗಾಲವು ಚಿಂತೆ ಈ ಜೀವಕ್ಕೆ
ತನ್ನ ಮನವು ಶ್ರೀರಂಗನೊಳ್ ಮೆಚ್ಚುವ ತನಕ
ಮಕ್ಕಳಿಲ್ಲದ ಚಿಂತೆ ಮಕ್ಕಳಾದರು ಚಿಂತೆ
ಒಕ್ಕಾಲು ಹೊನ್ನು ಕೊಡುವ ಚಿಂತೆಯು
ಅಕ್ಕರೆಯಿಂದಲಿ ತರುಗಳ ಕಾಯ್ದರು
ಕಕ್ಕುಲತೆಯ ಬಿಟ್ಟು ಹೋಗದ ಚಿಂತೆ ||

28 ಈ ಪದಗಳ ಸಂಧಿ ಬಿಡಿಸಿ ಸಂಧಿಯ ಹೆಸರು ಬರೆಯಿರಿ 2

ನೆಮ್ಮದಿಯಿಂದ, ಅಷ್ಟೈಶ್ವರ್ಯ

29 ಈ ಪದಗಳ ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರು ಬರೆಯಿರಿ - 2

ವಾಯುಪುತ್ರ, ತುದಿಮೂಗು

30 ಕೆಳಗಿನ ಸಾಲಿಗೆ ಗಣಪ್ರಸ್ತಾರ ಹಾಕಿ ಛಂದೋರೂಪ ತಿಳಿಸಿರಿ - 3

ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್

31 ಖಾಲಿ ಇರುವ ಜಾಗವನ್ನು ಸೂಕ್ತಪದದಿಂದ ಬರ್ತಿ ಮಾಡಿರಿ $\frac{1}{2} \times 4 = 8$

(i) ರಸವೆ ಜನನ, ವಿರಸ ಮರಣ .................... ಜೀವನಾ

(ii) ನರರ ನಡುವಿನ ಅಡ್ಡ ಗೋಡೆಗಳನ್ನು ಕುಟ್ಟಿ ಕೆಡಹುವೆವು ನಾವು ..........................

(iii) ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ ........................... ನಿಮ್ಮ ದಾನ

(iv) ............................ ತಿಳಿನೀರ ತಕ್ಕೊಂಡು ಬಂಗಾರ ಮಾರಿ ತೊಳೆದೇನೆ

(v) ಫುಟ್‌ಬಾಲ್ ಕೆಂಪಯ್ಯನವರು ಹೆಚ್ಚಾಗಿ ಪ್ರತಿನಿಧಿಸಿದ್ದ ರಾಜ್ಯ ............................

(vi) ಶರಣರ ಗುಣವನ್ನು .......................... ನೋಡು

(vii) ರಾಜನ ಮಗನ ಕಿವಿ ............................

(viii) ಓಟುರುಕ ಎಂಬುದು ...................................

32 ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ (ಮಿತಿ - 150 ಶಬ್ದಗಳು) 10

(i) ಕ್ರೀಡೆಗಳ ಮಹತ್ವ

(ii) ಓದುವ ಹವ್ಯಾಸ

(iii) ಪರಿಸರ ಸಂರಕ್ಷಣೆ

33 ಈ ಹೇಳಿಕೆಯ ಅರ್ಥವನ್ನು ಸುಮಾರು ಹತ್ತು ವಾಕ್ಯಗಳಲ್ಲಿ ವಿವರಿಸಿ 5

ಕೂತು ಉಣ್ಣು ವವನಿಗೆ ಕುಡಿಕೆ ಹೊನ್ನು ಸಾಲದು.

34 ನಿಮಗೆ ಹಾಗೂ ನಿಮ್ಮ ಸಹಪಾಟಿಗಳಿಗೆ ಸಮಾಜ ವಿಜ್ಞಾನದ ಪಾಠ್ಯಪುಸ್ತಕಗಳು ಬೇಕಾಗಿವೆ. ಈ ಪುಸ್ತಕದ 75 ಪ್ರತಿ ಕಳಿಸುವಂತೆ - ರಾಘವೇಂದ್ರ ಪುಸ್ತಕ ಭಂಡಾರ, ನರಸಿಂಹರಾಜ ಕಾಲೋನಿ, ಬೆಂಗಳೂರು ಇವರಿಗೆ ಪತ್ರಬರೆಯಿರಿ ನಿಮ್ಮ ಹೆಸರು ಸಂತೋಷ್, ಗ್ರಾಮೀಣ ಪ್ರೌಢಶಾಲೆ, ಜರಗನಹಳ್ಳಿ - ಚಿತ್ರದುರ್ಗ ಜಿಲ್ಲೆ. 5

35 ನಿಮ್ಮ ಮನೆಯ ಸುತ್ತ ಮುತ್ತ ಮೈಕ್ ಹಾವಳಿ ಹೆಚ್ಚಾಗಿ ಮನೆಯ ಶಾಂತಿ ಕದಡುತ್ತಿದೆ. ಪಂಚಾಯತಿ ಅಧಿಕಾರಿಗಳಿಗೆ ಪತ್ರಬರೆದು ಇದನ್ನು ನಿಲ್ಲಿಸಲು ಮನವಿ ಮಾಡಿರಿ. 5

36 ನೀವು ಪರಮೇಶ್ವರ ಎಂದು ಬಾವಿಸಿಕೊಂಡು ಕ್ರಾಸ್ ಮಾಡಿದ (ಅಡ್ಡಗೆರೆ ಎಳೆದ) 4,570/- ರೂಪಾಯಿಗಳ ಚೆಕ್‌ನ್ನು ನಾಗವೇಣಿ ಅವರಿಗೆ ದಿನಾಂಕ 12-11-2010 ರಂದು ನೀಡಿರುವಿರಿ. ಇದನ್ನು ಸೂಕ್ತವಾದ ವಿವರಣೆಯೊಂದಿಗೆ ಬ್ಯಾಂಕ್‌ನ ಉಳಿತಾಯ ಖಾತೆಯ ಹಣ ಸಂದಾಯದ ಪತ್ರವನ್ನು ಭರ್ತಿ ಮಾಡಿರಿ. 5

ವಿವರಗಳು ಃ ಶಾಖೆ ಬನ್ನೆರುಘಟ್ಟ ರಸ್ತೆ - ಬೆಂಗಳೂರು

ದಿನಾಂಕ ಃ 28-11-2010 ಖಾತೆ ಸಂಖ್ಯೆ 5834

ಚೆಕ್ ಃ ಸಿಂಡಿಕೇಟ್ ಬ್ಯಾಂಕ್

ಶಾಖೆ ಃ ಚಿತ್ರದುರ್ಗ

ಚೆಕ್ ನಂಬರ್ ಃ 08345678

................................................ ಶಾಖೆ ತಾ.:.....................20

ಶ್ರೀಮತಿ/ಶ್ರೀ.......................................................... ಇವರ ಖಾತೆಗೆಜಮಾ

ಖಾತೆ ಇರುವ ಶಾಖೆ ..........................................................

ಖಾತೆಯ ನಮೂನೆ ..........................................................

ಖಾತೆ ಸಂಖ್ಯೆ

| ವಿವರಣೆ ನಗದು / ಡಿಡಿ / ಚೆಕ್ಕುಗಳು | ರೂ. | ಪೈ. |
|---|---|---|
| | | |
| | | |
| | | |
| | | |
| | | |
| | | |
| ಒಟ್ಟು ಮೊತ್ತ | | |

ರೂ. (ಅಕ್ಷರಗಳಲ್ಲಿ) ..........................................................

..........................................................

.............................. ನಗದಿಗಾರ .............................. ಅಧಿಕೃತರ ಸಹಿ

## ಕರ್ಣಾಟಕ ಬ್ಯಾಂಕ್ ಲಿಮಿಟೆಡ್

**ಜಮಾ ಚಲನ್** ತಾರೀಖು 20 F.No. 693 A

.......................................................... ಶಾಖೆ ಖಾತೆ ಸಂಖ್ಯೆ

ಶ್ರೀಮತಿ / ಶ್ರೀ .......................................................... ಇವರ ಖಾತೆಗೆ ಜಮಾ

ಖಾತೆಯ ನಮೂನೆ: ಉಳಿತಾಯ ಖಾತೆ / ಚಾಲ್ತಿ ಖಾತೆ / ಓವರ್ ಡ್ರಾಫ್ಟ್ / ಇತರೆ (ನಮೂದಿಸಿ)

✔ (ಅನ್ವಯವಾಗುವುದಕ್ಕೆ ಗುರುತು ಮಾಡಿ)

ದೂರವಾಣಿ / ಮೊಬೈಲ್ ನಂಬ್ರ

ಖಾತೆ ಇರುವ ಶಾಖೆ ..........................................................

ಪಾನ್ ಸಂಖ್ಯೆ :

(ಒಂದು ದಿನಕ್ಕೆ ರೂ. 50,000/- ಮತ್ತು ಅದಕ್ಕೂ ಹೆಚ್ಚು ನಗದನ್ನು ಪಾವತಿಸಲು ಪಾನ್ ನಮೂದಿಸಿ. ಪಾನ್ ಇಲ್ಲದಿದ್ದಲ್ಲಿ ನಮೂನೆ ನಂ. 60 / 61ನ್ನು ದ್ವಿಪ್ರತಿಯೊಂದಿಗೆ ಸಲ್ಲಿಸಿ.)

ಜಮಾ ಮಾಡಿದವರ ಹೆಸರು ಮತ್ತು ವಿಳಾಸ ..........................................................

| ಬ್ಯಾಂಕಿನ ಹೆಸರು ಮತ್ತು ಶಾಖೆ | ಸ್ಥಳ | ಚೆಕ್/ಡಿಡಿ ನಂಬ್ರ ಮತ್ತು ದಿನಾಂಕ | ಚೆಕ್/ಡಿಡಿ ಮೊಬಲಗು ರೂ. | ಪೈ. |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | ಒಟ್ಟು ಮೊತ್ತ | | |

| ನಗದು ಮೌಲ್ಯ | ಸಂಖ್ಯೆ | ಮೊಬಲಗು ರೂ. | ಪೈ. |
|---|---|---|---|
| 1000 x | | | |
| 500 x | | | |
| 100 x | | | |
| 50 x | | | |
| 20 x | | | |
| 10 x | | | |
| 5 x | | | |
| ಇತರೆ ಮತ್ತು ಚಿಲ್ಲರೆ | | | |
| ಒಟ್ಟು ಮೊತ್ತ | | | |

ರೂ. (ಅಕ್ಷರಗಳಲ್ಲಿ) ..........................................................

ವಹಿವಾಟು ಸಂಖ್ಯೆ (ಕಛೇರಿ ಉಪಯೋಗಕ್ಕಾಗಿ)

ಜಮಾದಾರರ ಸಹಿ .............................. ನಗದಿಗಾರ .............................. ದಾಖಲೆದಾರ .............................. ಅಧಿಕೃತರ ಸಹಿ ..............................

ಟಿಪ್ಪಣಿ : 1. ದಯಮಾಡಿ ನಗದು / ಸ್ಥಳೀಯ / ಹೊರಗಿನ ಚೆಕ್ ಮತ್ತು ಡ್ರಾಫ್ಟ್‌ಗಳನ್ನು ಜಮಾ ಮಾಡಲು ಬೇರೆ ಚಲನ್‌ಗಳನ್ನು ಉಪಯೋಗಿಸಿರಿ. 2. ನಗದು / ಚೆಕ್ ಮತ್ತು ಡ್ರಾಫ್ಟ್‌ಗಳನ್ನು ಜಮಾ ಮಾಡುವಾಗ ಖಾತೆಯ ನಂಬ್ರ ಮತ್ತು ಶಾಖೆಯ ಹೆಸರನ್ನು ತಪ್ಪದೆ ನಮೂದಿಸಬೇಕು.

37 ಕೆಳಗೆ ಕಾಣಿಸಿರುವ ಗದ್ಯಭಾಗ ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ -

ಪ್ರಸಿದ್ಧ ಲೇಖಕ ಗಿಬ್ಬನ್ಸ್ ಬರೆದಿದ್ದಾನೆ - " ಎರಡನೇ ಶತಮಾನದಲ್ಲಿ ಪ್ರಸಿದ್ಧ ರೋಮನ್ ನಾಗರಿಕತೆಯ ಅಧಃಪತನಕ್ಕೆ ಆಗಿನ ಜನರ ಅಭಿರುಚಿ ಕೀಳುಮಟ್ಟಕ್ಕೆ ಇಳಿದುದೇ ಮುಖ್ಯ ಕಾರಣವಾಗಿತ್ತು ...................... ಕೊಲೆ ಹಿಂಸೆ ಮತ್ತು ರಕ್ತಪಾತಗಳನ್ನು ನೋಡಿ ಚಪ್ಪಾಳೆ ತಟ್ಟಿ ಮನೋರಂಜನೆ ಪಡೆಯುವ ಕೀಳುಮಟ್ಟಕ್ಕೆ ಇಳಿದಿದ್ದರು.

ಉತ್ತಮವಾದ ಅಭಿರುಚಿ ಹೇಗಿರಬೇಕು ಎಂಬುದಕ್ಕೆ ಮಹಾವಿಜ್ಞಾನಿ ಚಾರ್ಲ್ಸ್ ಡಾರ್ವಿನ್ ಹೇಳಿದ ಮಾತುಗಳು ಚಿಂತನೀಯ ಃ ನನ್ನ ಜೀವನ ಮತ್ತೆ ಪ್ರಾರಂಭಿಸುವುದು ಸಾಧ್ಯವಾದರೆ. ಆಗ ನಾನು ವಾರಕ್ಕೆ ಒಂದು ಬಾರಿಯಾದರೂ ಕವನ ಓದುವ ಮತ್ತು ಸಂಗೀತ ಕೇಳುವ. ಪರಿಪಾಠವನ್ನು ಮಾಡಿಕೊಳ್ಳುತ್ತೇನೆ. ನನ್ನ ಕಳೆದ ಜೀವನದ ಅವಧಿಯಲ್ಲಿ ಈ ಅಭಿರುಚಿಗಳನ್ನು ಬೆಳೆಸದೇ ಇದ್ದುದರಿಂದ ನನ್ನ ಮೆದುಳಿನ ಒಂದು ಭಾಗ ಬಳಕೆಯ ಅಭಾವದಿಂದಾಗಿ ನಿರುಪಯುಕ್ತವಾಯಿತು. ಈ ಅಭಿರುಚಿಗಳ ಕೊರತೆ ನಾನು ಸಂತೋಷ ಹೊಂದದೇ ಇರುವುದ್ದಕ್ಕೆ ಕಾರಣವಾಯಿತು. ಅದು ನನ್ನ ಬುದ್ಧಿ ಶಕ್ತಿ ಹಾಗೂ ನೈತಿಕತೆಗಳಿಗೆ ಹಾನಿಕಾರಕವಾಗಿ ಪರಿಣಮಿಸುವುದರೊಡನೆ ನನ್ನ ಮೆದುಳಿನ ಭಾವಪ್ರಧಾನವಾದ ಭಾಗವನ್ನು ದುರ್ಬಲಗೊಳಿಸಿತು.

ಪ್ರಶ್ನೆಗಳು ಃ

(i) ರೋಮನ್ ಸಾಮ್ರಾಜ್ಯದ ಪತನಕ್ಕೆ ಕಾರಣವೇನು ? 1

(ii) ಉತ್ತಮ ಅಭಿರುಚಿಯ ಬಗ್ಗೆ ಚಾರ್ಲ್ಸ್ ಡಾರ್ವಿನ್ ಅಭಿಪ್ರಾಯವೇನು ? 2

(iii) ಡಾರ್ವಿನ್ ಹೇಳುವಂತೆ ನಿರುಪಯುಕ್ತವಾದುದು ಏನು ? ಅದರ ಪರಿಣಾಮವೇನಾಯಿತು ? 2

(iv) 'ನಷ್ಟ' - ಎಂಬ ಅರ್ಥ ಕೊಡುವ ಕನಿಷ್ಟ ಎರಡು ಶಬ್ದಗಳನ್ನು ಮೇಲಿನ ಲೇಖನದಿಂದ ಆರಿಸಿ ಬರೆಯಿರಿ. 1

(v) ಈ ಲೇಖನಕ್ಕೆ ಒಂದು ಶೀರ್ಷಿಕೆ ಕೊಡಿರಿ. 1